KACM510002562026

## ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ.,ರವರ ನ್ಯಾಯಾಲಯಃ
## ನ.ರಾ.ಪುರ

### ಸಿ.ಸಿ. ನಂಃ **160/2026**

ಫಿರ್ಯಾದುದಾರರು : ಸರ್ಕಾರದ ಪರವಾಗಿ ನ.ರಾ. ಪುರ ಪೊಲೀಸರು

:ವಿ:

ಆರೋಪಿ : ಜಯನ್, ಬಿನ್ ರವಿ, 40 ವರ್ಷ,
ವ್ಯವಸಾಯ ವೃತ್ತಿ,
ವಾಸ ಃ ಚಿಟ್ಟಿಕುಡಿಗೆ, ಸಂಕ್ಸೆ ಗ್ರಾಮ,
ನ.ರಾ.ಪುರ ತಾಲ್ಲೂಕು.

------

### ದೋಷಾರೋಪಣೆ

ರಘುನಾಥ ಗೌಡ ಕೆ.ಟಿ., ಬಿ.ಕಾಂ. ಎಲ್.ಎಲ್.ಬಿ. ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ., ನ.ರಾ.ಪುರ ಆದ ನಾನು ಮೇಲ್ಕಂಡ ಆರೋಪಿತರಾದ ನಿಮ್ಮ ಮೇಲೆ ಮಾಡುವ ದೋಷಾರೋಪಣೆ ಏನೆಂದರೆಃ

ನ.ರಾ. ಪುರ ಪೊಲೀಸ್ ಠಾಣಾ ವ್ಯಾಪ್ತಿಯ ಸಂಕ್ಸೆ ಗ್ರಾಮದ ಸರ್ವೆ ನಂ.35 ರಲ್ಲಿರುವ ಚಿಟ್ಟಿಕುಡಿಗೆಯ ಹುಲ್ಲು ಬನ್ನಿ ಪ್ರದೇಶದಲ್ಲಿ ಚಾಸಾ-1 ರವರು ಹಂದಿ ಫಾರಂ ಮಾಡಿಕೊಂಡಿದ್ದು, ಆರೋಪಿಯು ಹಂದಿ ಫಾರಂ ಪಕ್ಕ ಮನೆ ಮಾಡಿಕೊಂಡು ವಾಸವಿದ್ದು ಇದರಿಂದ ಕೆಟ್ಟವಾಸನೆ ಬರುತ್ತಿದ್ದು, ಈ ಸಂಬಂಧ ಆರೋಪಿಯಾಂದ ನೀವು ದಿನಾಂಕಃ 19.12.2025 ರಂದು ಸಂಜೆ 7-30 ಗಂಟೆಯ ಸಮಯದಲ್ಲಿ ಹಂದಿ ಫಾರಂನಲ್ಲಿ ಕೆಲಸ ಮಾಡುತ್ತಿದ್ದ ಚಾಸಾ-1 ರವರನ್ನು ಕುರಿತು ನಿನಗೆ ಎಷ್ಟು ಸಲ ಹೇಳಿದರು ಜಾಗ ಬಿಟ್ಟು ಹೋಗುತ್ತಿಲ್ಲ ಹಾಗೂ ಹಂದಿ ಫಾರ್ಮ್ ಇಲ್ಲಿ ಮಾಡಬೇಡ ಎಂದರು ಮಾಡುತ್ತಿದ್ದೀಯಾ ಎಂದು ಹೇಳಿ ಸೂಳೆಮಗನೆ, ಬೋಳಿಮಗನೆ ಎಂದು ಅವಾಚ್ಯವಾಗಿ ನಿಂದಿಸಿದ್ದು ಹಾಗೂ

ನಂತರ ಆರೋಪಿಯಾದ ನೀವು ಚಾಸಾ-4 ಮತ್ತು 5 ರವರಿಗೆ ಸೂಳೆ ಮುಂಡೇರಾ, ಬೋಳಿ ಮುಂಡೇರಾ ಎಂದು ಅವಾಚ್ಯ ಶಬ್ಧಗಳಿಂದ ನಿಂದಿಸಿದ್ದು, ಆ ಮೂಲಕ ಬಿ.ಎನ್.ಎಸ್. ಕಲಂ 352 ರ ಪ್ರಕಾರ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಸಂಜ್ಞೇಯದಲ್ಲಿ ಎಸಗಿರುತ್ತೀರಿ.

ಮೇಲ್ಕಂಡ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ ಆರೋಪಿಯಾದ ನೀವು ಚಾಸಾ-4 ಮತ್ತು 5 ರವರು ಜಗಳ ಬಿಡಿಸಲು ಬಂದಿದ್ದು ಸದರಿಯವರಿಗೆ ಕೈಯಿಂದ ಹೊಡೆದು ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿ ಆ ಮೂಲಕ ಬಿ.ಎನ್.ಎಸ್. ಕಲಂ 115(2)ರ ಪ್ರಕಾರ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಸಂಜ್ಞೇಯದಲ್ಲಿ ಎಸಗಿರುತ್ತೀರಿ.

ಮೇಲ್ಕಂಡ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ ಆರೋಪಿಯಾದ ನೀವು ಮಾರಾಕಾಯುಧವಾದ ಕಬ್ಬಿಣದ ಪಟ್ಟಿಯಿಂದ ಚಾಸಾ-1 ರವರಿಗೆ ಎಡ ಮೊಣಕಾಲಿನ ಕೆಳಭಾಗಕ್ಕೆ, ಎಡಗಣ್ಣಿನ ಕೆಳಭಾಗದ ಹತ್ತಿರ ಹೊಡೆದು ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿ ಆ ಮೂಲಕ ಬಿ.ಎನ್.ಎಸ್. ಕಲಂ 118(1)ರ ಪ್ರಕಾರ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಸಂಜ್ಞೇಯದಲ್ಲಿ ಎಸಗಿರುತ್ತೀರಿ.

ಮೇಲ್ಕಂಡ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ ಆರೋಪಿಯಾದ ನೀವು ಚಾಸಾ-4 ಮತ್ತು 5 ರವರ ಬಟ್ಟೆ ಹರಿದು ಸದರಿಯವರ ಮಾನಕ್ಕೆ ಧಕ್ಕೆಯುಂಟಾಗುವ ರೀತಿಯಲ್ಲಿ ವರ್ತಿಸಿ ಬಿ.ಎನ್.ಎಸ್. ಕಲಂ 74 ರ ಜೊತೆ ಸಹವಾಚಕ ಕಲಂ.190 ರ ಪ್ರಕಾರ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಸಂಜ್ಞೇಯದಲ್ಲಿ ಎಸಗಿರುತ್ತೀರಿ.

ಮೇಲ್ಕಂಡ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ ಆರೋಪಿಯಾದ ನೀವು ಚಾಸಾ-1, 4 ಮತ್ತು 5 ರವರಿಗೆ ಕೊಲೆ ಮಾಡುವುದಾಗಿ ಪ್ರಾಣ ಬೆದರಿಕೆ ಹಾಕಿ ಬಿ.ಎನ್.ಎಸ್. ಕಲಂ

351(2) ಮತ್ತು (3)ರ ಪ್ರಕಾರ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಸಂಜ್ಞೇಯದಲ್ಲಿ ಎಸಗಿರುತ್ತೀರಿ.

ಪ್ರ:1: ಈಗ ಓದಿ ಹೇಳಿದ ದೋಷಾರೋಪಣೆ ತಿಳಿಯಿತೇ?

ಉ : ತಿಳಿಯಿತು.

ಪ್ರ:2: ತಪ್ಪು ಒಪ್ಪಿಕೊಳ್ಳುತ್ತೀರೋ ಅಥವಾ ವಿಚಾರಣೆ ಆಗಬೇಕಾ?

ಉ : ಬೇಡ. ವಿಚಾರಣೆಯಾಗಬೇಕು ಎಂದಿದ್ದಾರೆ.

ಈ ಮೇಲ್ಕಂಡ ದೋಷಾರೋಪಣೆಯನ್ನು ನಾನೇ ಸ್ವತಃ ಆರೋಪಿಗೆ ಓದಿ ಹೇಳಿ, ಅವರು ಕೊಟ್ಟ ಉತ್ತರವನ್ನು ಬರೆದುಕೊಂಡಿದ್ದು, ಮೇಲೆ ಹೇಳಿರುವುದು ಸತ್ಯ ಹಾಗೂ ಸರಿಯಾಗಿದೆ ಎಂದು ದೃಢೀಕರಿಸುತ್ತೇನೆ.

ದಿನಾಂಕ : 22 ನೇ ದಿವಸ ಜುಲೈ ಮಾಹೆ 2026.

(ರಘುನಾಥ ಗೌಡ ಕೆ.ಟಿ.)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರದನ್ಯಾದಂ., ನ.ರಾ. ಪುರ.

Jayan.
ಆರೋಪಿ ಸಹಿ: